ತರುವುದರಲ್ಲೂ 9 ಜನರನ್ನು ನಾಮಿನೇಟ್ ಮಾಡುವಂತಾದ್ದು ತಂದರೆ ಅದು ತದ್ವಿರುದ್ಧವಲ್ಲವೇ ? ಒರಿಜಿನಲ್‌ನಲ್ಲಿ ಕಡಿಮೆ ಇದ್ದರೆ ಜಾಸ್ತಿ ಮಾಡಬೇಕು ಇಲ್ಲ, ಜಾಸ್ತಿ ಇದ್ದರೆ ಕಡಿಮೆ ಮಾಡಬೇಕು. ಈಗ ಏನಾಗಿದೆ ಎರಡರಲ್ಲೂ ಒಂದೇ ಇದೆ. Which is the fact and which is the truth. ಇರತಕ್ಕ ಸತ್ಯಾಂಶವನ್ನು ವಾರೆಮಾಚುವುದಾದರೆ ಹೇಗೆ ? ಈ ವಿಷಯದ ಬಗ್ಗೆ ಒರಿಜಿನಲ್ ಆಕ್ಟ್‌ನಲ್ಲಿ ಏನಿದೆ, ಈಗ ಆವೆಂಡ್‌ಮೆಂಟ್‌ನಲ್ಲಿ ಏನು ತರಲಾಗಿದೆ, ಇದನ್ನು ಮಾನ್ಯ ಮಂತ್ರಿಗಳು ಸರಿಪಡಿಸಬೇಕು.

ಶ್ರೀ ಎ ಲಕ್ಷ್ಮೀಸಾಗರ್.—ಇದು ಪ್ರಿಂಟ್ ಮಾಡುವಾಗ, ಅಚ್ಚು ಹಾಕುವಾಗ ತಪ್ಪಿದೆ. ಅದನ್ನು ನಾನು ಹೇಳುತ್ತೇನೆ. 'In the origanal act, it is "eight persons". We want to increase it to 9 ಆಕ್ಟ್‌ನಲ್ಲಿ ಸರಿಯಾಗಿದೆ' ಪ್ರಿಂಟ್‌ನಲ್ಲಿ ಮಿಸ್ಟೇಕ್ ಆಗಿದೆ.

Mr. SPEAKER — This is printer's devil.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮಂತ್ರಿಗಳು ತಪ್ಪು ಎಂದು ಒಪ್ಪಿಕೊಳ್ಳುವುದಾದರೆ ಅದನ್ನು ಸರಿಪಡಿಸಿ ಸರ್‌ಕ್ಯುಲೇಟ್ ಮಾಡಲಿ. ಅದನ್ನು ಸರಿಪಡಿಸಿ ಇಂಟ್ರಡ್ಯೂಸ್ ಮಾಡಲಿ.

Sri A. LAKSHMISAGAR.—Instead of mentioning "eight persons" in the extract of the original Bill, it has been printed by mistake as Nine persons. This is a printer's devil. What is the constitutional defect here ? I thought my learned friend would make a valid, perfectly legal, perfectly reasonable and understandable argument but there is nothing. He is beating about the bush.

ಅಧ್ಯಕ್ಷರು.—ಪ್ರಿಂಟ್ ಮಿಸ್ಟೇಕ್ ಆಗಿರುವುದನ್ನು ಒಪ್ಪಿಕೊಂಡಿದ್ದಾರೆ ಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು)—. ಅಧ್ಯಕ್ಷರೆ, ನಾನು ಈ ಕೆಳಕಂಡ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿ ಕೋರುತ್ತೇನೆ.

ಕರ್ನಾಟಕ ಕಾನೂನು ಸಲಹಾ ಮಂಡಲಿ (ತಿದ್ದುಪಡಿ) ವಿಧೇಯಕ 1983.

ಅಧ್ಯಕ್ಷರು.—ಪ್ರಸ್ತಾವವು ಹೀಗಿದೆ :—

ಕೆರ್ನಾಟಕ ಕಾನೂನು ಸಲಹಾ ಮಂಡಲಿ (ತಿದ್ದುಪಡಿ) ವಿಧೇಯಕ 1983, ಮಂಡಿಸಲು ಅನುಮತಿಯನ್ನು ನೀಡುವುದು.

(ಪ್ರಸ್ತಾವವು ಅಂಗೀಕರಿಸಲ್ಪಟ್ಟು ಅನುಮತಿ ನೀಡಲಾಯಿತು.)

ಶ್ರೀ ಎ. ಲಕ್ಷ್ಮೀಸಾಗರ್. ನಾನು "ಕರ್ನಾಟಕ ಕಾನೂನು ಸಲಹಾ ಮಂಡಲಿ (ತಿದ್ದುಪಡಿ) ವಿಧೇಯಕ 1983" ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ*

ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವ್ಯಕ್ತಿ ಪರ ಶುಲ್ಕ ನಿಷೇಧಿಸುವ) ವಿಧೇಯಕ 1983 ಮಂಡನೆ ಕೋರುವ ಪ್ರಸ್ತಾವ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಅಧ್ಯಕ್ಷರೆ, ಮಾನ್ಯ ವಿದ್ಯಾಮಂತ್ರಿಗಳ ಪರವಾಗಿ ಈ ಕೆಳಗೆ ಕಂಡ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವ್ಯಕ್ತಿ ಪರ ಶುಲ್ಕ ನಿಷೇಧಿಸುವ) ವಿಧೇಯಕ 1983.

ಅಧ್ಯಕ್ಷರು.—ಪ್ರಸ್ತಾವ ಹೀಗಿದೆ :—

ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವ್ಯಕ್ತಿ ಪರ ಶುಲ್ಕ ನಿಷೇಧಿಸುವ) ವಿಧೇಯಕ 1983. ಮಂಡಿಸಲು ಅನುತಿಯನ್ನು ನೀಡುವುದು.

(ಪ್ರಸ್ತಾವವು ಅಂಗೀಕರಿಸಲ್ಪಟ್ಟು ಅನುಮತಿ ನೀಡಲಾಯಿತು)

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವ್ಯಕ್ತಿ ಪರ ಶುಲ್ಕ ನಿಷೇಧಿಸುವ) ವಿಧೇಯಕ 1983 ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕ ಮಂಡಿಸಲಾಗಿದೆ.*

ಕರ್ನಾಟಕ ರಾಜ್ಯ ಸಾರ್ವಜನಿಕ ವರ್ಕ್ಫ್ (ಮಿತಿಯ ವಿಸ್ತರಣೆ) (ಕರ್ನಾಟಕ ತಿದ್ದುಪಡಿ) ವಿಧೇಯಕ 1983. ಮಂಡನೆ ಕೋರುವ ಪ್ರಸ್ತಾವ

ಶ್ರೀ ಅಜೀಜ್ ಸೇಠ್ (ಕಾರ್ಮಿಕ ಹಾಗೂ ವರ್ಕ್ಫ್ ಮಂತ್ರಿಗಳು).—ಅಧ್ಯಕ್ಷರೆ, ಈ ಕೆಳಕಂಡ

---

*ಅನುಬಂಧ